SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 03

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ-2019 ಪುರಸ್ಕೃತ ಸಂಸ್ಥೆ)
ಮಾಸಿಕ e-ನ್ಯೂಸ್ ಲೆಟರ್ - ಮೇ 2022

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. - 574 216

## ಟಿಸಿಎಸ್ ಮ್ಯಾರಥಾನ್ 2022ನಲ್ಲಿ ಭಾಗವಹಿಸಲು ತೆರಳಿದ್ದ ತಂಡ




### ಸೇವಾಭಾರತಿ ತಂಡದಿಂದ ನ್ಯಾಯಮೂರ್ತಿ ಅಶೋಕ ಜಿ. ನಿಜಗಣ್ಣವರ ಭೇಟಿ

### ಸಂಸ್ಥೆಯ ಅಧ್ಯಕ್ಷರಾದ ಕೆ. ವಿನಾಯಕ ರಾವ್‌ರವರಿಗೆ ಸನ್ಮಾನ

- ಬೆಂಗಳೂರು
- ಉಡುಪಿ
- ಮಡಿಕೇರಿ
- ಮೂಡಿಗೆರೆ ಭೇಟಿ

### ಕುಂದಾಪುರ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯಿಂದ 5 ವಾಟರ್‌ಬೆಡ್ ಹಸ್ತಾಂತರ

### ಮಹಿಳಾ ಮತ್ತು ಅಂಗವಿಕಲ ಕಲ್ಯಾಣ ಇಲಾಖೆ ಸಚಿವರಾದ ಹಾಲಪ್ಪ ಬಸಪ್ಪ ಆಚಾರ್‌ರವರ ಭೇಟಿ

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಈ ತಿಂಗಳು ವ್ಯಾರಥಾನ್‌ನಲ್ಲಿ 6 ಮಂದಿ ಭಾಗವಹಿಸಿದ್ದು, ಇತರೇ ಪುನಶ್ಚೇತನ ಕೇಂದ್ರಗಳನ್ನು ಭೇಟಿ ಮಾಡಿರುವುದು, ಸರಕಾರೇತರ ಸ್ವಯಂಸೇವಾ ಸಂಸ್ಥೆಗಳನ್ನು ಭೇಟಿ ಮಾಡಿರುವುದು, ನಮ್ಮೆಲ್ಲರಿಗೂ ಜೀವನದುತ್ಸಾಹ ತುಂಬಿಸಿದ ಮೊದಲ ಬಾರಿಗೆ 300 ಕಿ.ಮೀ. ಪ್ರಯಾಣ ಮಾಡಿದ 4 ಮಂದಿ ಫಲಾನುಭವಿಗಳ ಅನುಭವವೇ ಬಾಕಿಯವರಿಗೂ ಪ್ರೇರಣೆ.

ನಮ್ಮ ಕಾರ್ಯಸ್ಪಷ್ಟತೆಗಾಗಿ ಅಂಗವಿಕಲ ಕಲ್ಯಾಣ ಇಲಾಖೆ ಆರೋಗ್ಯ ಇಲಾಖೆಯ ಆಯುಕ್ತರ ಭೇಟಿ, ಮಂತ್ರಿಗಳ ಭೇಟಿಗಳ ಪರಿಣಾಮಗಳು ಮುಂದಿನ ದಿನಗಳಲ್ಲಿ ಕಾಣಬಹುದಾಗಿದೆ.

ಮತ್ತೆ ಉಡುಪಿ ಜಿಲ್ಲೆಯ ಪ್ರಸ್ತಾಪ ಮಾಡಲೇಬೇಕಿದೆ. ವಿದ್ಯಾರ್ಥಿಗಳ ಕೊರತೆಯಿಂದ ಪಾಳುಬಿದ್ದ ಶಾಲೆಯು ನಮಗೆ ಕಾರ್ಯಕ್ಕೆ ಸಿಗುವ ಸೂಚನೆಗಳು ಸಿಕ್ಕಿದೆ. ಆ ಭಾಗದ ಫಲಾನುಭವಿಗಳಿಗೆ ಅದೇ ಹತ್ತಿರ ಲಭ್ಯವಾಗುವ ಆಶಾಕಿರಣವಾಗಿ ಒಂದು ಸೇವಾಕೇಂದ್ರ ಎದ್ದು ನಿಲ್ಲಲಿದೆ.

ಮಡಿಕೇರಿ ಜಿಲ್ಲೆಯಲ್ಲಿ ನಿಧಾನಗತಿಯಲ್ಲಿ ಕಾರ್ಯವಿಸ್ತಾರಕ್ಕೆ ಪುನಃ ಚಾಲನೆ ನೀಡಲಾಗಿದೆ. ಕೇಂದ್ರಕ್ಕೆ ಕೆಎಂಸಿ ಮಣಿಪಾಲದ ಪಿಎಂಆರ್ ವಿಭಾಗದ ಡಾ. ಮೈತ್ರೇಯಿ ಸಿ. ಪಾಟೀಲ್ ಸೇವಾಧಾಮಕ್ಕೆ ಭೇಟಿ ನೀಡಿರುತ್ತಾರೆ. ಎರಡನೇ ಶನಿವಾರ ನಮ್ಮ ಕೇಂದ್ರದಲ್ಲಿ ಅವರು ಲಭ್ಯರಿರುತ್ತಾರೆ. ಫಲಾನುಭವಿಗಳು ಸದುಪಯೋಗ ಪಡೆದುಕೊಳ್ಳಬಹುದು.

28/05/2022 ರಂದು ನಮ್ಮನ್ನಗಲಿದ ಬೆನ್ನುಮೂಳೆ ಮುರಿತಗೊಂಡ ಪುತ್ತೂರಿನ ದಯಾನಂದ ಪಾಚಾಳಿಯವರು ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಕಣ್ಣುದಾನ ಮಾಡುವ ಮೂಲಕ ಇಡೀ ಸಮಾಜಕ್ಕೆ ಪ್ರೇರಣೆಯಾಗಿದ್ದಾರೆ. ನಾವೂ ನೇತ್ರದಾನದ ಸಂಕಲ್ಪ ತೊಡೋಣ. ಇಬ್ಬರ ಬದುಕಿಗೆ ಕಣ್ಣಾಗೋಣ.

'ಸೇವಾ ಹಿ ಪರಮೋಧರ್ಮ'

ತಮ್ಮವ..

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

### ಪ್ರಧಾನ ಕಚೇರಿ :

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

### ಜಿಲ್ಲಾ ಕಚೇರಿ :

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

### ಸೇವಾ ಕೇಂದ್ರ :

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)

ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888


### ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

### ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ಪಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜ್ಯೋಸ್ ಪಿರೇರಾ

### ಸಂಚಾಲಕರು

ಶ್ರೀ ಕೆ. ಪುರಂದರ ರಾವ್ – ಸಂಚಾಲಕರು, ಸೇವಾಧಾಮ
ಶ್ರೀಯುತ ರಾಯನ್ ಫೆರ್ನಾಂಡಿಸ್ – ನಿರ್ದೇಶಕರು, ಸೇವಾಧಾಮ
ಶ್ರೀ ವಿಜಯ ಕೊಡವೂರು – ನಿರ್ದೇಶಕರು, ಸೇವಾಧಾಮ
ಡಾ. ಮುರಳೀಧರ ನಾಯಕ್ – ನಿರ್ದೇಶಕರು, ಸೇವಾಧಾಮ

## ಬೆಂಗಳೂರು ಭೇಟಿ

**04/05/2022 ರಿಂದ 06/05/2022**

1] ನ್ಯಾಯಮೂರ್ತಿ ಅಶೋಕ ಜಿ. ನಿಜಗಣ್ಣವರ, ಸದಸ್ಯರು, ಕರ್ನಾಟಕ ಕಾನೂನು ಆಯೋಗ ಇವರನ್ನು ಸೇವಾಭಾರತಿ ತಂಡ ಭೇಟಿ ಮಾಡಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಚುಟುಕಾಗಿ ತಿಳಿಸಲಾಯಿತು. ಈ ಸಂದರ್ಭದಲ್ಲಿ ಅವರು ರೂ. 10001/– ಅನ್ನು ಸಂಸ್ಥೆಯ ಕಾರ್ಯವಿಸ್ತಾರಕ್ಕಾಗಿ ದೇಣಿಗೆಯನ್ನು ನೀಡಲಾಯಿತು.



2] ಆರ್.ಅಶೋಕ್, ಮಾನ್ಯ ಕಂದಾಯ ಸಚಿವರನ್ನು ನಮ್ಮ ತಂಡ ಭೇಟಿಮಾಡಿ ಕೇಂದ್ರಕ್ಕೆ ಸಹಾಯ ನೀಡುವಂತೆ ಮನವಿ ನೀಡಲಾಯಿತು.



3] ಹಾಲಪ್ಪ ಬಸಪ್ಪ ಆಚಾರ್, ಸಚಿವರು, ಮಹಿಳಾ ಮತ್ತು ಅಂಗವಿಕಲ ಕಲ್ಯಾಣ ಇಲಾಖೆ, ಉಡುಪಿ, ಕಾರವಾರ ನಮ್ಮ ಯೋಜನೆಯನ್ನು ಹಸ್ತಾಂತರಿಸಲಾಯಿತು.



4] ಬೆಂಗಳೂರಿನ ಬಸವನಗುಡಿಯಲ್ಲಿರುವ ಅಮೃತ ಶಿಶುನಿವಾಸಕ್ಕೆ ಭೇಟಿ ನೀಡಿ ಸೇವಾಧಾಮಕ್ಕೆ ಅಗತ್ಯವಿರುವ ದಿನಸಿಗಳಿಗಾಗಿ ವಿನಂತಿಪತ್ರ ನೀಡಲಾಯಿತು. ಕಾರ್ಯದರ್ಶಿ ಉಮಾಶಂಕರ್‌ರವರ ಉಪಸ್ಥಿತಿಯಲ್ಲಿ ಪಡೆದುಕೊಳ್ಳಲಾಯಿತು.

5] ಇತ್ತೀಚೆಗೆ ಉಡುಪಿ ಜಿಲ್ಲೆಯ ನಿವಾಸಿ ಅಶೋಕ್, ಇವರು ತೀವ್ರ ತರದ ಬೆನ್ನುಹುರಿ ಅಪಘಾತಕ್ಕಾಗಿ, ನಿಮಾನ್ಸ್ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅವರನ್ನು ನಮ್ಮ ತಂಡ ಭೇಟಿ ಮಾಡಿ, ಅವರಲ್ಲಿ ವಿಶ್ವಾಸ ತುಂಬಿಸಿ ಶೀಘ್ರ ಗುಣಮುಖವಾಗುವಂತೆ ಹಾರೈಸಲಾಯಿತು.

ಈ ಬೆಂಗಳೂರು ಭೇಟಿಯ ಸಂಧರ್ಭದಲ್ಲಿ ಅಧ್ಯಕ್ಷರಾದ ಕೆ.ವಿನಾಯಕರಾವ್, ಕಾರ್ಯಕರ್ತ ಸಚಿನ್ ಕುಮಾರ್, ರಿಸರ್ಚ್ ಸ್ಕಾಲರ್ ಆಶಾಲತಾರವರು ತಂಡದಲ್ಲಿ ಉಪಸ್ಥಿತರಿದ್ದರು.

## ಉಡುಪಿ ಭೇಟಿ

ಮೇ 9 ರಂದು ಉಡುಪಿಯಲ್ಲಿ ಮುಂದಿನ ದಿನಗಳಲ್ಲಿ ನಡೆಸಲುದ್ದೇಶಿಸಿರುವ ಬೆನ್ನುಹುರಿ ಅಪಘಾತಕ್ಕೊಳಗಾದವರ ಸೇವಾಕೇಂದ್ರಕ್ಕಾಗಿ ಕಟಪಾಡಿ ಮತ್ತು ಕೊರಂಗ್ರಪಾಡಿಯಲ್ಲಿ ಸ್ಥಗಿತಗೊಂಡ ಶಾಲೆಗಳನ್ನು ವೀಕ್ಷಿಸಲಾಯಿತು. ಈ ಸಂದರ್ಭದಲ್ಲಿ ಪ್ರಮುಖರಾದ ಉಡುಪಿ ಸಕ್ಷಮದ ಜಿಲ್ಲಾಧ್ಯಕ್ಷರಾದ ಲತಾ ಭಟ್, ಕಾರ್ಯದರ್ಶಿ ನಿಕೇಶ್, ನಗರಸಭಾ ಸದಸ್ಯರಾದ ವಿಜಯ ಕೊಡವೂರು ಮತ್ತು ಸೇವಾಭಾರತಿಯ ಪ್ರತಿನಿಧಿಗಳಾಗಿ ಕನ್ಯಾಡಿ ವಿನಾಯಕ ರಾವ್, ವಿಷ್ಣು ಪ್ರಸಾದ್ ತೆಂಕಿಲ್ಲಾಯ, ರೂಪಲಕ್ಷ್ಮೀ, ಮನು ಉಪಸ್ಥಿತರಿದ್ದರು.

ಮೇ 9 ರಂದು ಉಡುಪಿ ಜಿಲ್ಲೆ ಅಂಬಾಡಿ ಮತ್ತು ಕೊರಂಗ್ರಪಾಡಿಯಲ್ಲಿ ಸರಕಾರಿ ಹಾಗೂ ಖಾಸಗಿ ಆಡಳಿತಕ್ಕೆ ಒಳಪಟ್ಟು ವಿದ್ಯಾರ್ಥಿಗಳಿಲ್ಲದೆ ಮುಚ್ಚಿರುವ ಶಾಲೆಗಳನ್ನು ವೀಕ್ಷಿಸಲಾಯಿತು. ನಮ್ಮ ಉಡುಪಿ ಜಿಲ್ಲೆಯಲ್ಲಿ ಕಾರ್ಯವಿಸ್ತಾರಕ್ಕಾಗಿ ಈ ಕಟ್ಟಡಗಳನ್ನು ಬಳಸಿ ಕೊಳ್ಳುವ ಉದ್ದೇಶ ಮುಂದಿನ ದಿನಗಳಲ್ಲಿ ಕಾರ್ಯಾನುಷ್ಠಾನಗೊಳ್ಳಲಿದೆ. ಅದಕ್ಕಾಗಿ ಖಾಸಗಿ ಆಡಳಿತ ಮಂಡಳಿಯ ಸಭೆಯಲ್ಲಿ ಪ್ರಸ್ತಾಪಗಳನ್ನಿಟ್ಟು ವಿನಂತಿಸಲಾಯಿತು.



ಕೆಎಂಸಿ ಕ್ಯಾಂಪಸ್‌ನಲ್ಲಿ ಆಕ್ಸಿಸ್ ಲೈಫ್ ಮತ್ತು ಮಾಹೆ ಜಂಟಿ ಆಶ್ರಯದಲ್ಲಿ ಕ್ಯಾನ್ಸರ್ ಪೀಡಿತ ಮಕ್ಕಳಿಗಾಗಿ ಪುನಶ್ಚೇತನ ಕಾರ್ಯ ನಡೆಯುತ್ತಿದ್ದು ಅದನ್ನು ಭೇಟಿ ಮಾಡಿ, ಅಲ್ಲಿರುವ ನಿವಾಸಿಗಳೊಂದಿಗೆ ಇದ್ದು ವಿಶ್ವಾಸ ತುಂಬುವ ಕಾರ್ಯ ಮಾಡಲಾಯಿತು. ಈ ನಮ್ಮ ತಂಡದಲ್ಲಿ ಸೇವಾ ಧಾಮದ ನಿರ್ದೇಶಕರಾದ ಮತ್ತು ನಗರಸಭಾ ಸದಸ್ಯರಾದ ವಿಜಯ ಕೊಡವೂರು, ವಿಷ್ಣು ಪ್ರಸಾದ್ ತೆಂಕಿಲ್ಲಾಯ, ಸಂಸ್ಥೆಯ ಇ.ಡಿ. ರೂಪಲಕ್ಷ್ಮಿ, ಸಕ್ಷಮದ ಜಿಲ್ಲಾ ಅಧ್ಯಕ್ಷರಾದ ಲತಾ ಭಟ್, ಸಿಬ್ಬಂದಿಗಳಾದ ಮನು ಹಾಗೂ ಕಾರ್ಯಕರ್ತರಾದ ಗಿರೀಶ ಕೊಡವೂರು, ಜಯರಾಜ ಸಾಲ್ಯಾನ್, ಡಾ. ಕೀರ್ತಿ, ನಿತೀಶ್, ಕಟೀಲ್ ಪ್ರಭು ಉಪಸ್ಥಿತರಿದ್ದರು.

# ಸೇವಾಭಾರತಿ ತಂಡದ ಭೇಟಿಗಳು

**ಮಡಿಕೇರಿ :** ದಿನಾಂಕ 5 ರಿಂದ 7ರ ತನಕ ನಮ್ಮ ತಂಡವು ವಿವಿಧ ಉದ್ದೇಶಗಳನ್ನಿಟ್ಟುಕೊಂಡು ಮಡಿಕೇರಿ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಮುಖರು, ಸಂಘ ಸಂಸ್ಥೆಗಳ ಪ್ರಮುಖರುಗಳನ್ನು ಭೇಟಿ ಮಾಡಿ ನಮ್ಮ ಕಾರ್ಯವಿಸ್ತಾರಕ್ಕಾಗಿ ಕೈಜೋಡಿಸುವಂತೆ ಮನವಿ ಸಲ್ಲಿಸಲಾಯಿತು.

ಕಾರ್ಯಕ್ರಮ ಸಂಯೋಜಕ ಆಶ್ರಿತ ಸಿ.ಪಿ, ಕ್ಷೇತ್ರ ಸಂಯೋಜಕ ಮನು, ತಂಡದ ಸದಸ್ಯರಾಗಿದ್ದರು.

1] ಡಾ. ಶಿವಪ್ರಸಾದ್, ತಾಲೂಕು ಆರೋಗ್ಯಾಧಿಕಾರಿ, ಸೋಮವಾರಪೇಟೆ
2] ಮಹೇಶ್, ವೃತ್ತ ನಿರೀಕ್ಷಕರು, ಕುಶಾಲನಗರ
3] ಡಾ. ಶ್ರೀನಿವಾಸ್, ತಾಲೂಕು ಆರೋಗ್ಯಾಧಿಕಾರಿ, ವಿರಾಜಪೇಟೆ
4] ಡಾ. ಚೆಂಗಪ್ಪ, ಅಧ್ಯಕ್ಷರು, ರೋಟರಿ ಕ್ಲಬ್
5] ಡಾ. ಕೆ.ಎಂ.ಕಾರ್ಯಪ್ಪ, ಡೀನ್ ಮತ್ತು ನಿರ್ದೇಶಕರು, ಕೊಡಗು ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್

**ಮೂಡಿಗೆರೆ :** ಮೇ 6 ರಂದು ಸೇವಾಧಾಮದ ನಿರ್ದೇಶಕರಾದ ರಾಯನ್ ಫೆರ್ನಾಂಡಿಸ್ ರವರು ಮೂಡಿಗೆರೆಯಲ್ಲಿರುವ ದಯಾಕರ ಆಸ್ಪತ್ರೆಯ ವೈದ್ಯರಾದ ಡಾ. ಹೇಮಂತ ನಾಯ್ಕರನ್ನು ಭೇಟಿ ಮಾಡಿ ಹಿಂದಿನ ತಿಂಗಳಲ್ಲಿ ಆಯೋಜಿಸಿದ್ದ ಶಿಬಿರಕ್ಕೆ ಸಹಕಾರ ನೀಡಿರುವುದಕ್ಕೆ ಆಸ್ಪತ್ರೆಯ ಎಲ್ಲ ವೈದ್ಯರು ಮತ್ತು ಶುಶ್ರೂಷಕಿಯರು ಹಾಗೂ ಸಿಬ್ಬಂದಿಗಳಿಗೆ ಕೃತಜ್ಞತೆ ಸಲ್ಲಿಸಿದರು.

**ಬೆಂಗಳೂರು :** ಉಡುಪಿಯ ನಿವಾಸಿ ನಮ್ಮ ಸ್ವಯಂ ಸೇವಕರಾದ ಅಶೋಕಣ್ಣನವರು ಬೆನ್ನುಹುರಿ ಅಪಘಾತಕ್ಕೊಳಗಾಗಿ ನಿಮಾನ್ಸ್ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರನ್ನು ಭೇಟಿ ಮಾಡಿ ಧೈರ್ಯ ತುಂಬುವ ಪ್ರಯತ್ನ ಮಾಡಲಾಯಿತು.



**ಕರ್ನಾಟಕ ರಾಜ್ಯ ಬೆನ್ನುಹುರಿ ಅಪಘಾತಕ್ಕೊಳಗಾದ ಅಂಗವಿಕಲರ ಸಂಘ [ರಿ] ಮಾಗಡಿ, ರಾಮನಗರ ಜಿಲ್ಲೆ ಇವರ ನೇತೃತ್ವದಲ್ಲಿ ನಡೆಯುತ್ತಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ಅಂಗವಿಕಲರಿಗಾಗಿ ಪುನಶ್ಚೇತನ ಕೇಂದ್ರವನ್ನು ನಮ್ಮ ತಂಡದಿಂದ ವೀಕ್ಷಿಸಲಾಯಿತು.**



**ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸಾಬಿಲಿಟಿ ಇವರು ನಡೆಸುತ್ತಿರುವ ಬೆಂಗಳೂರಿನ ಜೀವನ ಭಿಮಾ ನಗರದಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರವನ್ನು ವೀಕ್ಷಿಸಿ ಮಾಹಿತಿ ಪಡೆದುಕೊಳ್ಳಲಾಯಿತು.**




ಬೆಂಗಳೂರು ಸಮರ್ಥನಂ ಅಂಗವಿಕಲರ ಸಂಸ್ಥೆ ನಡೆಸುತ್ತಿರುವ ಅಂಧ ಹಾಗೂ ವಿಶೇಷ ಮಕ್ಕಳ ಶಾಲೆ, ತರಬೇತಿ ಸಂಸ್ಥೆಯನ್ನು ವೀಕ್ಷಿಸಿ ಮಾಹಿತಿ ಪಡೆದುಕೊಳ್ಳಲಾಯಿತು.



**ವಿಶ್ವೇಶ್ವರಯ್ಯ ಮ್ಯೂಸಿಯಂ ಪಾರ್ಕ್ ಮತ್ತು ಕಬ್ಬನ್ ಪಾರ್ಕ್**

## ಸೇವಾಭಾರತಿ ತಂಡದಿಂದ ಅಧ್ಯಯನ ಪ್ರವಾಸ







**ಬೆಂಗಳೂರು :** ಬೆಂಗಳೂರಿನಲ್ಲಿರುವ ಎ.ಪಿ.ಡಿ. ಸಂಸ್ಥೆಯು ಹಾಗೂ ಮಾಗಡಿಯಲ್ಲಿ ಕರ್ಬಾಸ್ ಸಂಸ್ಥೆಯು ನಡೆಸಲ್ಪಡುತ್ತಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರಗಳು, ಮಾರ್ಗದರ್ಶಿ ಸಂಸ್ಥೆ, ಸಮರ್ಥನಂ, ವಿಕಲ ಚೇತನರ ಸಂಸ್ಥೆಗಳನ್ನು ಇತ್ತೀಚೆಗೆ ಸೇವಾಭಾರತಿ ತಂಡವು ಭೇಟಿ ಮಾಡಿ ಮಾಹಿತಿ ಪಡೆದುಕೊಳ್ಳಲಾಯಿತು. ಟಿಸಿಎಸ್ ವ್ಯಾರಥಾನ್ 2022ನಲ್ಲಿ ಭಾಗವಹಿಸಲು ತೆರಳಿದ್ದ ತಂಡವು ಖ್ಯಾತ 4 ಸಂಸ್ಥೆಗಳನ್ನು ಭೇಟಿ ಮಾಡಿತು. ಆ ಸಂಸ್ಥೆಗಳ ನಿರ್ವಹಣೆ, ಕಾರ್ಯವ್ಯಾಪ್ತಿ, ಉದ್ದೇಶಗಳ ಅರಿವುಗಳನ್ನು ತಿಳಿದುಕೊಳ್ಳುವುದರ ಜೊತೆಗೆ ಸೇವಾಭಾರತಿಯ ಕಾರ್ಯಕ್ರಮಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು.

ತಂಡದಲ್ಲಿ ಅಧ್ಯಕ್ಷರಾದ ಕನ್ಯಾಡಿ ವಿನಾಯಕ ರಾವ್, ಕಾರ್ಯದರ್ಶಿ ಸ್ವರ್ಣಗೌರಿ, ಸೇವಾಧಾಮದ ನಿರ್ದೇಶಕರಾದ ಉಡುಪಿಯ ರಾಯನ್ ಫೆರ್ನಾಂಡಿಸ್, ಸ್ವಯಂಸೇವಕರಾದ ಉಡುಪಿ ವಿಷ್ಣು ಪ್ರಸಾದ್ ತೆಂಕಿಲ್ಲಾಯ, ಲತಾ ಭಟ್‌ರೊಂದಿಗೆ 4 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಕಾರ್ಯಕರ್ತರು, ಸಿಬ್ಬಂದಿಗಳು, ಜೊತೆಗಿದ್ದರು. ಈ ಅಧ್ಯಯನ ಪ್ರವಾಸವು ಸೇವಾಭಾರತಿಯ ಕಾರ್ಯವಿಸ್ತಾರಕ್ಕೆ ಭದ್ರಬುನಾದಿಯಾಗಲು ಸಹಕಾರಿಯಾಗಲಿವೆ.

## ಅಧ್ಯಕ್ಷರ ಭೇಟಿ



**ಮೇ 18 ರಂದು ಸಂಸ್ಥೆಯ ಅಧ್ಯಕ್ಷರಿಂದ ಸೇವಾಧಾಮದ ಭೇಟಿ ಮತ್ತು ಪ್ರೇರಣಾ ಮಾತುಕತೆ ನಡೆಸಿದರು. ಅವರ ಜೊತೆ ಸಿಬ್ಬಂದಿಗಳಾದ ಚರಣ ಹಾಗೂ ಜೋಸ್‌ಫಿನ್‌ರವರು ಉಪಸ್ಥಿತರಿದ್ದರು.**

ನಮ್ಮ ಸಿಬ್ಬಂದಿ ಅಕ್ಷತಾ ಭಟ್‌ರವರ ತಂದೆಯು ಬೆನ್ನುಹುರಿ ಅಪಘಾತಕ್ಕೀಡಾಗಿ ಅತ್ತಾವರದ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಮೇ 22 ರಂದು ಅವರನ್ನು ನಮ್ಮ ತಂಡ ಭೇಟಿಮಾಡಿ ಭರವಸೆ ತುಂಬಲಾಯಿತು.

ದಿನಾಂಕ 22/ 05/ 2022 ರಂದು ದ.ಕ. ಮತ್ತು ಉಡುಪಿ ಜಿಲ್ಲಾ ವಿಶಿಷ್ಟ ಚೇತನರ ಸಂಘ(ರಿ) ಮಂಗಳೂರು ಮತ್ತು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ. ಜಿಲ್ಲಾ ಶಾಖೆ, ಮಂಗಳೂರು ಹಾಗೂ



ಮಂಗಳೂರು ವಿಶ್ವವಿದ್ಯಾಲಯ ಯುವ ರೆಡ್‌ಕ್ರಾಸ್ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಸಂಘದ 30ನೇ ವರ್ಷದ ವಾರ್ಷಿಕ ಸಮಾವೇಶ ದಿವ್ಯಾಂಗರಿಗೆ ವೈದ್ಯಕೀಯ ನೆರವು ಮತ್ತು ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮದಲ್ಲಿ ಸೇವಾಭಾರತಿ ಟ್ರಸ್ಟ್(ರಿ) ಕನ್ಯಾಡಿ ಇದರ ಅಧ್ಯಕ್ಷರಾದ ಕೆ.ವಿನಾಯಕ ರಾವ್‌ರವರನ್ನು ರವೀಂದ್ರ ಕಲಾಭವನ, ವಿಶ್ವವಿದ್ಯಾಲಯ ಕಾಲೇಜು, ಹಂಪನಕಟ್ಟೆ ಮಂಗಳೂರು ಇಲ್ಲಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ನಿಟ್ಟೆ ವಿಶ್ವವಿದ್ಯಾಲಯದ ಮಾನ್ಯ ಸಹಕುಲಾಧಿಪತಿಗಳಾದ ಡಾ. ಎಂ. ಶಾಂತಾರಾಮ ಶೆಟ್ಟಿ, ದ.ಕ. ಜಿಲ್ಲಾ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿಗಳಾದ ರೊ. ಸಿ.ಎ.ಶ್ರೀಶಾಂತಾರಾಮ ಶೆಟ್ಟಿ, ಕಾರ್ಪೊರೇಷನ್ ಬ್ಯಾಂಕಿನ ನಿವೃತ್ತ ಉಪ ಮಹಾಪ್ರಬಂಧಕರು ಸಕ್ಷಮ ಕರ್ನಾಟಕ ಟ್ರಸ್ಟಿ ಶ್ರೀ ಜಯದೇವ ಕಾಮತ್ ಉಪಸ್ಥಿತರಿದ್ದರು. ಸಿಬ್ಬಂದಿಗಳಾದ ಚರಣ್, ಜೋಸ್‌ಫಿನ್, ಮನು ಭಾಗವಹಿಸಿದ್ದರು.



**ಮೇ 18 ರಂದು ನಮ್ಮ ಸಂಸ್ಥೆಯಿಂದ ನಿಶುಲ್ಕವಾಗಿ ಕೊಟ್ಟಂತಹ ಪ್ರಾಣರಕ್ಷಕ ನೆಬುಲೈಸರನ್ನು ತನ್ನ ತಾಯಿಗೆ ಎರಡು ವರ್ಷಗಳ ಕಾಲ ಉಪಯೋಗಿಸಿ ಹಿಂತಿರುಗಿಸಿದ ಮೂಡುಬಿದ್ರೆಯ ನಿವಾಸಿಗಳಾದ ಅವರ ಮಕ್ಕಳು ಸಿಸ್ಟರ್ ಜೂಲಿಯಾನ, ಜಾಸ್ಮಿನ್, ರೋಷನ್ ಮತ್ತು ಲೂಯಿಸ್ ರೋಡ್ರಿಗಸ್ ಸೇವಾಧಾಮಕ್ಕೆ ಭೇಟಿ ನೀಡಿ ಸನಿವಾಸಿಗಳನ್ನು ಮಾತನಾಡಿಸಿ ಸಂಸ್ಥೆಯ ಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ ಸೇವಾಧಾಮದ ಸೇವಾ ಕಾರ್ಯಗಳಿಗೆ ರೂಪಾಯಿ 5000/– ದೇಣಿಗೆಯನ್ನು ನೀಡಿ ಶುಭ ಹಾರೈಸಿದರು.**

## ಉಡುಪಿಯ ಭೇಟಿ

ಮೇ 23 ರಂದು ನಮ್ಮ ತಂಡವು ಉಡುಪಿಯ ಕೊರಂಗ್ರಪಾಡಿಯಲ್ಲಿ ವಿದ್ಯಾರ್ಥಿಗಳಿಲ್ಲದೆ ಮುಚ್ಚಿ ಹೋಗಿರುವ ಶಾಲೆಯನ್ನು ನಮ್ಮ ಉದ್ದೇಶಗಳಿಗಾಗಿ ನೀಡುವಂತೆ ಕಾಪು ವಿಧಾನಸಭಾ ಕ್ಷೇತ್ರದ ಶಾಸಕರಾದ ಲಾಲಾಜಿಮೆಂಡನ್, ಬೇಟಿಮಾಡಿ ಮನವಿಯನ್ನು ಸಲ್ಲಿಸಲಾಯಿತು.

ಸ್ಯಾಬರಕಟ್ಟೆಯ ರೋಟರಿ ಕ್ಲಬ್‌ನ ಅಧ್ಯಕ್ಷರು ಮತ್ತು ಕಾರ್ಯದರ್ಶಿಯನ್ನು ಭೇಟಿ ಮಾಡಲಾಯಿತು. ಸುತ್ತಮುತ್ತಲಿರುವ ಬೆನ್ನುಹುರಿ ಅಪಘಾತದ ದಿವ್ಯಾಂಗರಿಗಾಗಿ ಸಹಾಯ ನೀಡುವಂತೆ ವಿನಂತಿಸಲಾಯಿತು.

ಜನತಾ ಕಾಲನಿಯಲ್ಲಿರುವ ಸಂತೋಷ್, ಬಾರ್ಕೂರಿನಲ್ಲಿರುವ ದಿನೇಶ್‌ಶೆಟ್ಟಿ, ಬ್ರಹ್ಮಾವರದ ಮಹೇಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವರನ್ನು ಭೇಟಿ ಮಾಡಲಾಯಿತು.

ಉಡುಪಿ ಜಿಲ್ಲಾ ಕಾರ್ಯನಿರ್ವಹಣಾಧಿಕಾರಿ ಪ್ರಸನ್ನ ಎಚ್. ಹಾಗೂ ನಮ್ಮ ಪ್ರಸ್ಥಾಪಿತ ಯೋಜನೆಗಾಗಿ ಪಾಳು ಬಿದ್ದಿರುವ ಕೊರಂಗ್ರಪಾಡಿ ಶಾಲಾ ವಠಾರವನ್ನು ನೀಡುವಂತೆ ವಿನಂತಿಸಲಾಯಿತು. ಮತ್ತು ವೈದ್ಯಾಧಿಕಾರಿಗಳಾದ ಡಾ। ನಾಗಭೂಷಣ ಉಡುಪರನ್ನು ಭೇಟಿಮಾಡಿ ಯೋಜನೆಗೆ ಇಲಾಖಾ ಮಟ್ಟದಲ್ಲಿ ಸಹಾಯ ಒದಗಿಸುವಂತೆ ಕೋರಲಾಯಿತು.



ನಮ್ಮ ತಂಡವು ಕೆಎಂಸಿಯ ಪಿಎಂಆರ್ ವಿಭಾಗದ ಡಾ. ಮೈತ್ರೇಯಿ ಹಾಗೂ ಸಿ.ಇ.ಓ. ಪ್ರಸನ್ನರವರನ್ನು ಭೇಟಿ ಮಾಡಿ ಮುಂದಿನ ದಿನಗಳಲ್ಲಿ ನಮ್ಮ ಕಾರ್ಯಸ್ಪಷ್ಟತೆಗೆ ಅಗತ್ಯವಾದ ಚಟುವಟಿಕೆ ಮತ್ತು ಕ್ರಮಗಳ ಬಗ್ಗೆ ಮತ್ತು ನಮ್ಮ ಸೇವಾಧಾಮದ ದಿನನಿತ್ಯದ ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಸಲಾಯಿತು.



ಮೇ 25 ರಂದು ಸುಮನಚಂದ್ರ ಶೇಖರ್‌ರವರು ಕುಟುಂಬ ಸಮೇತರಾಗಿ ಸೇವಾಧಾಮಕ್ಕೆ ಭೇಟಿಕೊಟ್ಟು ಕಾರ್ಯಚಟುವಟಿಕೆಗಳನ್ನು ಗಮನಿಸಿ 5000/– ಮೌಲ್ಯದ ಚೆಕ್ಕು ಹಸ್ತಾಂತರಿಸಲಾಯಿತು.



ಮೇ 25 ರಂದು ಕುಂದಾಪುರದ ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ಸಭಾಪತಿ ಶ್ರೀ ಜಯಕುಮಾರ್ ಶೆಟ್ಟಿ ಮತ್ತು ನಿರ್ವಹಣಾ ಸಮಿತಿಯ ಸದಸ್ಯರಾದ ಗಣೇಶ್ ಆಚಾರ್ಯ ಅವರನ್ನು ಭೇಟಿಮಾಡಿ ಸೇವಾಭಾರತಿ ಹಾಗೂ ಸೇವಾಧಾಮದ ಸೇವಾ ಚಟುವಟಿಕೆಗಳ ಕುರಿತು ಅವರಿಗೆ ಮಾಹಿತಿ ನೀಡಲಾಯಿತು.

ಅವರು ಸೇವಾಭಾರತಿಯ ಕಾರ್ಯವನ್ನು ಶ್ಲಾಘಿಸಿದರು ಮತ್ತು ಬೆನ್ನುಹುರಿ ಗಾಯಗೊಂಡ 5 ಜನರಿಗೆ ವಾಟರ್ ಬೆಡ್‌ಗಳನ್ನು ಹಸ್ತಾಂತರಿಸಿದರು ಮತ್ತು ಮುಂದಿನ ದಿನಗಳಲ್ಲಿ ಈ ಉತ್ತಮ ಕಾರ್ಯಕ್ಕೆ ಬೆಂಬಲ ನೀಡುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಕೆ.ವಿನಾಯಕರಾವ್, ವಿಷ್ಣುಪ್ರಸಾದ್ ತೆಂಕಿಲ್ಲಾಯ ಹಾಗು ಸಿಬ್ಬಂದಿಗಳಾದ ರೂಪಲಕ್ಷ್ಮಿ, ಚರಣ್ ಕುಮಾರ್, ಮನುರವರು ಉಪಸ್ಥಿತರಿದ್ದರು.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು** : ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

**ಆರೋಗ್ಯ ಸ್ಪರ್ಶ** : ಉಡುಪಿ ಜಿಲ್ಲೆಯಲ್ಲಿರುವ ಬೆನ್ನು ಹುರಿ ಅಪಘಾತ ಗೊಂಡವರಿಗಾಗಿ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಮನೆಮನೆಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ.

**ಸಾಮರ್ಥ್ಯಮ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ವೃತ್ತಿ ತರಬೇತಿಗಳು.

**ಸೇವಾ ಚರಣ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಸಾಧನ ಸಲಕರಣೆಗಳ ಸಹಾಯ.

**ಸೇವಾನಿರ್ಮಲ** : ದಿವ್ಯಾಂಗ ಸ್ನೇಹಿ ಶೌಚಾಲಯ ಮತ್ತು ರ್‍ಯಾಂಪ್‌ಗಳಿಗೆ ಭಾಗಶಃ ಧನ ಸಹಾಯ.

**ಆರೋಗ್ಯ ಸಿಂಧು** : ಆರೋಗ್ಯ ತಪಾಸಣೆ ಮಾಹಿತಿ ಹಾಗೂ ತರಬೇತಿಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**